| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 536/2024**

ಪಿಡ್ಬ್ಲೂಃ 4 ಸಿಡ್ಬ್ಲ್ಯೂಃ 4

ಸಾಕ್ಷಿದಾರಳ ಹೆಸರು ಃ ನಿಧಿವಿಲಾಸ್ ಬಾಬ್ರೆಕರ್
ತಂದೆಯ ಹೆಸರು ಃ ವಿಲಾಸ್ ಬಾಬ್ರೆಕರ್
ಪ್ರಾಯ ಃ 17 ವರ್ಷ
ಉದ್ಯೋಗ ಃ ವಿದ್ಯಾರ್ಥಿ
ವಾಸ ಃ ಹಾರವಾಢ

ಸಾಕ್ಷಿಯು ಬಾಲ ಸಾಕ್ಷಿಯಾಗಿದ್ದರಿಂದ ಸಾಕ್ಷಿಗೆ ಸಾಮಾನ್ಯ ಪ್ರಶ್ನೆಗಳನ್ನು ಕೇಳಲಾಗಿ ಸಾಕ್ಷಿಯು ಸರಿಯಾಗಿ ಉತ್ತರಿಸಿದ್ದರಿಂದ ಸಾಕ್ಷಿಯ ಹೇಳಿಕೆ ನೀಡಲು ಅರ್ಹನಿರುತ್ತಾನೆ ಎಂದು ಪರಿಗಣಿಸಿ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.

ದಿನಾಂಕ 17.05.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು ಪ್ರಯಾಣಿಸುತ್ತಿದ್ದ ಬಸ್ಸಿ ನ ಚಾಲಕನಾದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೋಪಿಯನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಚಾಸಾ-1 ನನ್ನ ಶಾಲೆಯ ಶಿಕ್ಷಕರು. ಚಾಸಾ-2 ಮತ್ತು 3 ಸಹಪಾಠಿಗಳು, ಚಾಸಾ- 8 ರಿಂದ 11 ರವರ ಪರಿಚಯ ಇದೆ. ಚಾಸಾ-5 ರಿಂದ 7 ರವರ ಪರಿಚಯ ಇಲ್ಲ.

ದಿಃ19.12.2023 ರಂದು ಬೆಳಿಗ್ಗೆ 6.00 ಗಂಟೆಗೆ ನಾವು ನಮ್ಮ ಶಾಲೆಯ ಒಟ್ಟು 43 ಜನ ಹಾರವಾಢದಿಂದ ಉಡುಪಿ, ಮಣಿಪಾಲ, ಕಾರ್ಕಳ, ಹೊರನಾಡು, ಶೃಂಗೇರಿಗೆ ಪ್ರವಾಸಕ್ಕೆ

ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ಹೊರಟಿದ್ದೇವು. ನಾವು ಮಣಿ ಪಾಲ ಉಡುಪಿ ದೇವಸ್ಥಾನಗಳಿಗೆ ಹೋಗಿ ಉಡುಪಿಯಲ್ಲಿ ವಿಶ್ರಾಂತಿಪಡೆದಿದ್ದು, ಮರುದಿನ ಕುದುರೆಮುಖ, ಹೊರನಾಡು ಶೃಂಗೇರಿ ಹೋಗಿದ್ದು ಅಲ್ಲಿಂದ ವಾಪಸ್ಸು ಬರುವಾಗ ಸುಮಾರು ಸಂಜೆ 5.15 ಗಂಟೆಗೆ ನಾವು ಹೋಗುತ್ತಿದ್ದ ಬಸ್ಸಿಗೆ ಅಪಘಾತವಾಗಿತ್ತು. ಸದ್ರಿ ಅಪಘಾತವು ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯಿಂದ ಬಸ್ಸನ್ನು ಚಲಾಯಿಸಿ ಮರಕ್ಕೆ ಢಿಕ್ಕಿ ಹೊಡೆದಿರುವುದೇ ಕಾರಣ. ಸದ್ರಿ ಅಪಘಾತದ ಪರಿಣಾಮ ಬಸ್ಸಿನ ಕಂಬ ನನ್ನಕುತ್ತಿಗೆ ಮತ್ತು ಕಾಲಿಗೆ ತಾಗಿತ್ತು . ಚಾಸಾ-3 ರವರಿಗೆ ಮೂಗಿನ ಮೂಳೆ ಮುರಿದಿತ್ತು ಚಾಸಾ-2 ರವರಿಗೆ ಪೆಟ್ಟಾಗಿತ್ತು. ಅಲ್ಲಿಂದ ಚಾಸಾ-9 ರವರು ನಮ್ಮನ್ನು ರಿಕ್ಷಾದಿಂದ ಕಾರ್ಕಳ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ಅಲ್ಲಿ ಚಿಕಿತ್ಸೆಪಡೆದು ಬೇರೆ ಬಸ್ಸಿನಲ್ಲಿ ಹಾರವಾಢಕ್ಕೆ ಹೊರಟೆವು.

ನನ್ನನ್ನು ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನಿಪಿ-2 ರಿಂದ 5 ಭಾವಚಿತ್ರದಲ್ಲಿ ಇರುವ ಬಸ್ಸು ನಾವು ಆ ದಿನ ಪ್ರಯಾಣಿಸಿದ್ದ ಬಸ್ಸು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದಃ

ದಿಃ19.12.2023 ರಂದು ಆರೋಪಿಯು ನಾವು ಪ್ರಯಾಣಿಸುತ್ತಿದ್ದ ಬಸ್ಸನ್ನು ನಿಧಾನವಾಗಿ ಚಲಾಯಿಸುತ್ತಿದ್ದರು. ಮಾರನೆ ದಿನ ನಾವು ಕುದುರೆಮುಖ, ಹೊರನಾಡು, ಶೃಂಗೇರಿಗೆ ಪ್ರವಾಸಕ್ಕೆ ಹೊರಟಿದ್ದೇವು. ಸದ್ರಿ ದಾರಿಯು ಘಾಟಿ ಪ್ರದೇಶವಾಗಿದ್ದು ತಿರುವುಮುರುವು ರಸ್ತೆ ಆಗಿದೆ. ನಾನು ಆರೋಪಿಯ 4 ನೇ ಹಿಂಬದಿ ಸೀಟಿನಲ್ಲಿ ಕುಳಿತ್ತಿದ್ದೆ. ಆ ಕಾರಣ ಬಸ್ಸಿನ ಮುಂಭಾಗದ ರಸ್ತೆಯಲ್ಲಿ ಯಾವೆಲ್ಲ ವಾಹನ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಜೊತೆ ನನ ಸಹಿಪಾಠಿ ಕುಳಿತ್ತಿದ್ದರು. ನನ್ನ ಜೊತೆ ಚಾಸಾ-2 ಮತ್ತು 3 ಕುಳಿತ್ತಿರಲ್ಲಿ ಅವರು ನಮ್ಮ ಸೀಟಿನ ಎದುರಿನ ಸೀಟಿನಲ್ಲಿ ಕುಳಿತ್ತಿದ್ದರು.

ಅಪಘಾತವಾದ ರಸ್ತೆ ತಿರುವಿನ ರಸ್ತೆಯಾಗಿತ್ತು. ಅಪಘಾತವಾದ ನಂತರ ಆಸ್ಪತ್ರೆಯಲ್ಲಿ ಸಂಜೆ 6.30 ರಿಂದ ರಾತ್ರಿ 10.30 ಗಂಟೆಯವರೆಗೆ ನಾವು ಅಲ್ಲಿಯೇ ಇದ್ದೇವು. ದಿಃ20.12.2023 ರಂದು ರಾತ್ರಿ ಅಲ್ಲಿಂದ ಹೊರಟು ನಾವು ನಮ್ಮ ಮನೆಯಾದ ಹಾರವಾಢಕ್ಕೆ ಮರುದಿನ ಬೆಳಗ್ಗಿನ ಜಾವ 12.00 ಗಂಟೆಗೆ ತಲುಪಿರುತ್ತೇವೆ. ನಾವು ಹಾರವಾಢಕ್ಕೆ ಹೋದ ನಂತರ ಮತ್ತೆ ಕಾರ್ಕಳ ಠಾಣೆಗೆ ಹಾಜರಾಗಿರುವುದಿಲ್ಲ.

ಎದುರಿನಿಂದ ಒಂದು ಜೀಪು ಅತೀವೇಗ ಹಾಗೂ ನಿರ್ಲಕ್ಷತನದಿಂದ ಬಂದಿರಬಹುದು, ಅದು ಢಿಕ್ಕಿಪಡಿಸುವುದನ್ನು ತಪ್ಪಿ ಸಲು ಆರೋಪಿಯು ರಸ್ತೆಯಿಂದ ಮಣ್ಣಿನ ರಸ್ತೆಗೆ ಹೋಗಲು ಪ್ರಯತ್ನಿಸಿದರು ಎಂದರೆ ಸರಿಯಲ್ಲ. ಸದ್ರಿ ಅಪಘಾತದಿಂದ ನನಗೆ ಪೆಟ್ಟಾಗಿದ್ದು ವಾರ್ಷಿಕವಾಗಿ ನನ್ನ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದಿಲ್ಲ. ಮುಂದುವರಿದ 1-2 ವಾರ ಶಾಲೆಗೆ ಹೋಗಿರುವುದಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ